**All India Radio: Bangalore**
**National Bulletin In Kannada**
**27.08.2025 19.35 p.m.**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**27.08.2025 19.35 p.m.**
**<><><><>**

ಮುಖ್ಯಾಂಶಗಳು

1. ರಸ್ತೆ ಬದಿ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸುವ ಪಿಎಂ ಸ್ವ-ನಿಧಿ ಯೋಜನೆ ವಿಸ್ತರಣೆ ; ಕೇಂದ್ರ ಸಚಿವ ಸಂಪುಟದ ಅನುಮೋದನೆ
2. ಆಪರೇಷನ್ ಸಿಂದೂರ್ ಹಾಗೂ ಮಹದೇವ್ ಕಾರ್ಯಾಚರಣೆಗಳಿಂದ ಭಯೋತ್ಪಾದಕ ಸಂಚುಗಾರರಿಗೆ ಸ್ಪಷ್ಟ ಸಂದೇಶ ರವಾನೆ - ಕೇಂದ್ರ ಗೃಹ ಸಚಿವ ಅಮಿತ್ ಶಾ
3. ಅಮೆರಿಕ ಸುಂಕದ ಹಿನ್ನೆಲೆ ಭಾರತದ ಆರ್ಥಿಕತೆ ರಕ್ಷಣೆಗೆ ಉಪಕ್ರಮ - ಸಚಿವ ಕೀರ್ತಿವರ್ಧನ್ ಸಿಂಗ್
4. ಕರ್ನಾಟಕ ಸೇರಿದಂತೆ ೭ ರಾಜ್ಯಗಳಲ್ಲಿ ನಾಳೆಯವರೆಗೆ ಅತ್ಯಂತ ಭಾರೀ ಮಳೆ ; ಹವಾಮಾನ ಇಲಾಖೆ ಮುನ್ಸೂಚನೆ
5. ಭಾರತದ ಶೂಟರ್ ಅನೀಶ್ ಬನ್ವಾಲ್‌ಗೆ ಏಷ್ಯನ್ ಚಾಂಪಿಯನ್ ಶಿಪ್‌ನಲ್ಲಿ ಬೆಳ್ಳಿ ಪದಕ

<><><><>

ರಸ್ತೆ ವ್ಯಾಪಾರಿಗಳ ಪಿಎಂ ಸ್ವನಿಧಿ ಯೋಜನೆ ಪುನರ್ ವಿನ್ಯಾಸಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಸಾಲ ಪಡೆಯುವ ಅವಧಿಯನ್ನು ೨೦೩೦ ರ ಮಾರ್ಚ್ ೩೧ರವರೆಗೆ ವಿಸ್ತರಿಸಲು ಇಂದು ನಡೆದ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ೭ ಸಾವಿರದ ೩೩೨ ಕೋಟಿ ರೂಪಾಯಿ ಗಾತ್ರದ ಯೋಜನೆ ಇದಾಗಿದೆ.  ಸಾಲ ನೀಡಿಕೆಯಲ್ಲಿ ಮೊತ್ತ, ಎರಡನೇ ಸಾಲ ಮರುಪಾವತಿ ಮಾಡಿದ ಫಲನುಭವಿಗಳಿಗೆ ಯು ಪಿ ಐ ಸಂಪರ್ಕಿತ ರೂಪೇ ಕ್ರೆಡಿಟ್ ಕಾರ್ಡ್, ಚಿಲ್ಲರೆ ಹಾಗೂ ಸಗಟು ವಹಿವಾಟು ಗಳಿಗೆ ಅಂಕೀಕೃತ ನಗದು ಪ್ರೋತ್ಸಾಹ ಮೊದಲಾದ ಅಂಶಗಳನ್ನು ಪರಿಷ್ಕೃತ ಯೋಜನೆ ಒಳಗೊಂಡಿದೆ. ಮೊದಲ ಸಾಲವನ್ನು ಇದುವರೆಗಿನ ೧೦ ಸಾವಿರ ದಿಂದ ೧೫ ಸಾವಿರ ರೂಪಾಯಿಗೆ, ಎರಡನೇ ಸಾಲವನ್ನು ಇದುವರೆಗಿನ ೨೦ ಸಾವಿರದಿಂದ ೨೫ ಸಾವಿರ ರೂಪಾಯಿಗೆ ಹೆಚ್ಚಿಸಲಾಗಿದೆ. ಮೂರನೇ ಸಾಲದ ನೀಡಿಕೆ ಮೊತ್ತದಲ್ಲಿ ಬದಲಾವಣೆ ಇರುವುದಿಲ್ಲ. ಈಗಿರುವ ೫೦ ಸಾವಿರ ರೂಪಾಯಿ ಮುಂದುವರೆಯಲಿದೆ. ಹೊಸ ವಿನ್ಯಾಸದಿಂದ ಒಂದು ಕೋಟಿ ೧೫ ಲಕ್ಷ ಫಲಾನುಭವಿಗಳಿಗೆ ಪ್ರಯೋಜನ ವಾಗುವ ನಿರೀಕ್ಷೆ ಇದೆ. ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಶಾಸನಬದ್ಧ ಪಟ್ಟಣಗಳಿಂದ ಜನಗಣತಿಯ ಪಟ್ಟಣ ಮತ್ತು ನಗರ ಪ್ರದೇಶದ ಸುತ್ತಲಿನ ಪ್ರದೇಶಗಳಿಗೆ ವರ್ಗೀಕೃತ ಪದ್ಧತಿಯಲ್ಲಿ ವಿಸ್ತರಿಸಲಾಗುತ್ತಿದೆ.

<><><><>

ಭಾರತದ ನಾಗರಿಕರ ಜೀವದೊಂದಿಗೆ ಆಟವಾಡಿದರೆ ಪರಿಣಾಮ ಏನಾಗುತ್ತದೆ ಎನ್ನುವ ಬಗ್ಗೆ ಆಪರೇಷನ್ ಸಿಂದೂರ್ ಹಾಗೂ ಆಪರೇಷನ್ ಮಹದೇವ್ ಕಾರ್ಯಾಚರಣೆಗಳು ಭಯೋತ್ಪಾದಕ ಸಂಚುಗಾರರಿಗೆ ಸ್ಪಷ್ಟ ಸಂದೇಶ ನೀಡಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಪಹಲ್ಗಾಮ್ ದಾಳಿಯ

ಉಗ್ರಗಾಮಿಗಳನ್ನು ನಿಷ್ಕ್ರಿಯಗೊಳಿಸಿದ ಆಪರೇಷನ್ ಮಹದೇವ್‌ನ ವೀರ ಯೋಧರನ್ನು ಭೇಟಿ ಮಾಡಿ, ಅವರು ಮಾತನಾಡುತ್ತಿದ್ದರು. ಆಪರೇಷನ್ ಸಿಂದೂರ್ ಜನರಲ್ಲಿ ತೃಪ್ತಿಯನ್ನು ತಂದರೆ ಆಪರೇಷನ್ ಮಹದೇವ್ ತೃಪ್ತಿಯನ್ನು ವಿಶ್ವಾಸವನ್ನಾಗಿ ಪರಿವರ್ತಿಸಿದೆ. ಆಪರೇಷನ್ ಮಹದೇವ್‌ನಲ್ಲಿ ಕೊಳ್ಳಲಾದ ಉಗ್ರಗಾಮಿಗಳೇ ಪಹಲ್ಗಾಮ್ ದಾಳಿ ನಡೆಸಿದವರು ಎಂದು ಎನ್‌ಐಎನ ವಿಧಿವಿಜ್ಞಾನ ಪ್ರಯೋಗಾಲಯ ತಾಂತ್ರಿಕವಾಗಿ ಸಾಬೀತುಪಡಿಸಿದೆ ಎಂದು ಅವರು ಹೇಳಿದರು. ಉಗ್ರಗಾಮಿಗಳು ತಮ್ಮ ಕಾರ್ಯತಂತ್ರ ಅಥವಾ ವಿಧಾನದಲ್ಲಿ ಯಾವುದೇ ರೀತಿಯ ಬದಲಾವಣೆ ತಂದು ಹಾನಿ ಉಂಟು ಮಾಡಲು ಪ್ರಯತ್ನಿಸಿದರೂ ಭಾರತದ ಯೋಧರು ಅದನ್ನು ಅಸಾಧ್ಯಗೊಳಿಸುವರು ಎಂದು ಸಾಬೀತುಪಡಿಸಿದ್ದಾರೆ ಎಂದು ಅಮಿತ್ ಶಾ ಹೇಳಿದರು. ಈ ಸಂದರ್ಭದಲ್ಲಿ ಆಪರೇಷನ್ ಮಹದೇವ್ ಕಾರ್ಯಾಚರಣೆ ಮಾಡಿದ ಸೇನಾಪಡೆ, ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಮತ್ತು ಕೇಂದ್ರ ಕಾಯ್ದಿಟ್ಟ ಪೊಲೀಸ್ ಪಡೆಯ ಧೀರ ರಕ್ಷಕರನ್ನು ಅಮಿತ್ ಶಾ ಗೌರವಿಸಿದರು.

<><><><>

ವಿವಿಧ ರಾಜ್ಯಗಳ ಒಟ್ಟು ೧೨ ಸಾವಿರದ ೩೨೮ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯ ೪ ರೈಲ್ವೆ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಸಿಕಂದರಾಬಾದ್-ವಾಡಿ, ೩ ಮತ್ತು ೪ನೇ ಪಥ ಇದರಲ್ಲಿ ಸೇರಿವೆ. ಇದಲ್ಲದೇ ಕರ್ನಾಟಕ ಸೇರಿದಂತೆ ೫ ರಾಜ್ಯಗಳ ೧೩ ಜಿಲ್ಲೆಗಳಲ್ಲಿ ರೈಲ್ವೆ ಜಾಲವನ್ನು ೫೬೫ ಕಿಲೋಮೀಟರ್‌ನಷ್ಟು ವಿಸ್ತರಿಸುವ ಪ್ರಸ್ತಾಪವನ್ನು ಇದು ಒಳಗೊಂಡಿದೆ. ಗುಜರಾತ್, ಕರ್ನಾಟಕ, ತೆಲಂಗಾಣ, ಬಿಹಾರ್ ಮತ್ತು ಅಸ್ಸಾಂಗಳ ೧೩ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ೫೬೫ ಕಿಲೋಮೀಟರ್ ರೈಲ್ವೆ ಜಾಲ ವಿಸ್ತರಿಸುವ ೪ ಯೋಜನೆಗಳನ್ನು ಇದು ಒಳಗೊಂಡಿದೆ. ಈ ಯೋಜನೆಗಳ ಕಾಮಗಾರಿ ೨೫೧ ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿ ಮಾಡಲಿವೆ.

<><><><>

೨೦೩೦ರ ಕಾಮನ್‌ವೆಲ್ತ್ ಕ್ರೀಡೆಗಳನ್ನು ಆಯೋಜಿಸುವ ಕುರಿತಾದ ಬಿಡ್ ಸಲ್ಲಿಸಲು ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿತು. ಈ ಬಿಡ್ ಸ್ವೀಕೃತಿಯಾದರೆ ಗುಜರಾತ್ ಸರ್ಕಾರಕ್ಕೆ ಅಗತ್ಯವಿರುವ ಅನುದಾನವನ್ನು ಸಂಬಂಧಪಟ್ಟ ಸಚಿವಾಲಯ ಹಾಗೂ ಇಲಾಖೆಗಳು ಒದಗಿಸಲು ಮತ್ತು ಆತಿಥ್ಯ ಸಹಕಾರ ಒಪ್ಪಂದಕ್ಕೆ ಸಹಿ ಹಾಕಲು ಅನುಮೋದನೆ ನೀಡಲಾಗಿದೆ. ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ೭೨ ದೇಶಗಳ ಅಥ್ಲೀಟ್‌ಗಳು ಪಾಲ್ಗೊಳ್ಳುತ್ತಿದ್ದು, ಈ ಸಂದರ್ಭಗಳಲ್ಲಿ ಕ್ರೀಡಾಪಟುಗಳಲ್ಲದೇ ಕ್ರೀಡಾಸಕ್ತರು ಭಾರತಕ್ಕೆ ಭೇಟಿ ನೀಡಲಿದ್ದು, ಸ್ಥಳೀಯವಾಗಿ ವ್ಯಾಪಾರ ಹಾಗೂ ಆದಾಯ ಗಳಿಕೆಗೆ ಅವಕಾಶವಾಗಲಿದೆ. ವಿಶ್ವಮಟ್ಟದ ಸೌಲಭ್ಯ ಹೊಂದಿರುವ ಅಹಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಈಗಾಗಲೇ ೨೦೨೩ರ ಐಸಿಸಿ ಕ್ರಿಕೆಟ್ ವರ್ಲ್ಡ್ ಕಪ್ ಫೈನಲ್ ಪಂದ್ಯವನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ.

<><><><>

ಭಾರತದ ಆರ್ಥಿಕತೆ ಅತ್ಯಂತ ಬಲಿಷ್ಠವಾಗಿದೆ ಎಂದು ವಿದೇಶಾಂಗ ವ್ಯವಹಾರ ಖಾತೆ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಹೇಳಿದ್ದಾರೆ. ಅವರು ನವದೆಹಲಿಯಲ್ಲಿಂದು ಅಮೆರಿಕದ ಶೇಕಡ ೫೦ರ ಸುಂಕ ಕುರಿತಾದ ಮಾಧ್ಯಮದವರ ಪ್ರಶ್ನೆಗೆ ಉತ್ತರ ನೀಡುತ್ತಿದ್ದರು. ದೇಶದ ಕೈಗಾರಿಕೆಗಳು ಅತ್ಯಂತ ಬಲಿಷ್ಠವಾಗಿರುವ ಕಾರಣ ಆರ್ಥಿಕತೆಯು ಬಲಿಷ್ಠವಾಗಿದೆ. ದೇಶ ಯಾವುದೇ ರೀತಿಯ ತೊಂದರೆ ಅನುಭವಿಸಲು ಸರ್ಕಾರ ಖಂಡಿತ ಅವಕಾಶ

ನೀಡುವುದಿಲ್ಲ ಎಂದು ಹೇಳಿದರು. ಸರ್ಕಾರ ಕೆಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಇಂಧನ ವಲಯ ಮುಖ್ಯವಾಗಿದ್ದು, ಭಾರತದ ಅನುಕೂಲ ಗಮನದಲ್ಲಿಟ್ಟು, ಇಂಧನ ಖರೀದಿ ಮುಂದುವರಿಸಲಾಗುವುದು ಎಂದು ಸಚಿವ ಕೀರ್ತಿವರ್ಧನ್ ಸಿಂಗ್ ಹೇಳಿದರು.

**ಧ್ವನಿ : ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ (೨೯ ಸೆಕೆಂಡ್‌ಗಳು)**

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ನಾಡಿದ್ದು, ಜಪಾನ್ ಪ್ರವಾಸ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಅವರನ್ನು ಸ್ವಾಗತಿಸಲು ಟೋಕಿಯೋ ಸಿದ್ಧವಾಗಿದೆ. ಇದು ಭಾರತ-ಜಪಾನ್ ನಡುವಿನ ಸಹಭಾಗಿತ್ವದಲ್ಲಿ ಹೊಸ ಯುಗ ತೆರೆಯುವುದೆಂದು ನಿರೀಕ್ಷಿಸಲಾಗಿದೆ. ಪ್ರಸ್ತುತ ಉಭಯ ದೇಶಗಳ ದ್ವಿಪಕ್ಷೀಯ ವ್ಯಾಪಾರ ವಹಿವಾಟು ೨೨ ಬಿಲಿಯನ್ ಡಾಲರ್‌ಗಳಷ್ಟಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿ ಸಂದರ್ಭದಲ್ಲಿ ಸೆಮಿಕಂಡಕ್ಟರ್, ರಕ್ಷಣಾ ಮತ್ತು ಭದ್ರತೆ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಮೂಲಸೌಕರ್ಯ, ಸಂಚಾರ ವ್ಯವಸ್ಥೆ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ದೊರಕುವ ಸಾಧ್ಯತೆಯಿದೆ. ಜಪಾನ್‌ದಲ್ಲಿರುವ ಭಾರತದ ರಾಯಭಾರಿ ಸಿಬಿ ಜಾರ್ಜ್ ಮಾತನಾಡಿ, ಉಭಯ ರಾಷ್ಟ್ರಗಳು, ಉನ್ನತ ತಂತ್ರಜ್ಞಾನ, ಸೆಮಿಕಂಡಕ್ಟರ್ ಕ್ಷೇತ್ರದಲ್ಲಿನ ಹೊಸ ಉಪಕ್ರಮಗಳ ಬಗ್ಗೆ ಆದ್ಯತೆ ನೀಡುತ್ತಿದೆ ಪ್ರಸ್ತುತ ಜಪಾನ್‌ನ ೧ ಸಾವಿರದ ೫೦೦ ಕಂಪನಿಗಳು ಕಾರ್ಯ ನಿರ್ವಹಿಸುತ್ತಿದ್ದು, ಇದನ್ನು ೧೫ ಸಾವಿರಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದ್ದಾರೆ.

<><><><>

ದೇಶದ ೭ ರಾಜ್ಯಗಳಲ್ಲಿ ನಾಳೆವರೆಗೆ ಅತ್ಯಂತ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಒಡಿಶಾ, ಛತ್ತಿಸ್‌ಗಢ, ಆಂಧ್ರಪ್ರದೇಶ, ಕರಾವಳಿ, ತೆಲಂಗಾಣ, ಮಧ್ಯ ಮಹಾರಾಷ್ಟ್ರ, ಕೇರಳ, ಕರಾವಳಿ ಕರ್ನಾಟಕಗಳಲ್ಲಿ ಭಾರೀ ಮಳೆ ಬಿಳಲಿದೆ. ಮುಂದಿನ ೭ ದಿನಗಳ ಕಾಲ ವಾಯವ್ಯ ಭಾರತದಲ್ಲಿ ಭಾರೀ ಮಳೆ ಮುಂದುವರೆಯಲಿದೆ. ಜಮ್ಮುವಿನ ಕೆಲ ಪ್ರದೇಶಗಳಲ್ಲಿ ಕಳೆದ ೨೪ ತಾಸುಗಳಲ್ಲಿ ೭೦ ವರ್ಷಗಳ ಕಾಲ ಕಂಡರಿಯದ ಮಳೆ ಬಿದ್ದಿದೆ. ಪಂಜಾಬ್‌ನಲ್ಲಿ ರಾವಿ ಬಿಯಾಸ್ ಸತ್ಲೆಜ್ ನದಿಗಳು ಉಕ್ಕೇರಿ ಹರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ರಕ್ಷಣಾ ಕಾರ್ಯ ಬರದಿಂದ ಸಾಗಿದೆ. ಹಿಮಾಚಲ ಪ್ರದೇಶದಲ್ಲಿ ಕೂಡ ನದಿಗಳು ಉಕ್ಕೇರಿ ಹರಿಯುತ್ತಿದ್ದು, ಜೀವ ಹಾಗೂ ಆಸ್ತಿ-ಪಾಸ್ತಿ ಹಾನಿಯುಂಟಾಗಿದೆ. ಚಂಬಾ ಜಿಲ್ಲೆಯಲ್ಲಿ ೫ ಜನ ಮೃತಪಟ್ಟ ಬಗ್ಗೆ ವರದಿಯಾಗಿದೆ.

<><><><>

ಭಾರತದ ಶೂಟರ್ ಅನೀಶ್ ಬನ್ವಾಲ್ ಏಷ್ಯನ್ ಚಾಂಪಿಯನ್ ಶಿಪ್‌ನಲ್ಲಿ ಬೆಳ್ಳಿಯ ಪದಕ ಗಳಿಸಿದ್ದಾರೆ. ಕಜಿಕಿಸ್ತಾನದ ಶೆಮ್ಕೆಂಟ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ೨೨ ವರ್ಷದ ಅನೀಶ್ ೩೫ ಅಂಕ ಗಳಿಸಿದರು. ಇದರೊಂದಿಗೆ ಒಟ್ಟಾರೆ ಭಾರತ ೨೩ ಪದಕಗಳನ್ನು ಗಳಿಸಿದಂತಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>